ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1, 3, 4 ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಎಲ್ ವಕೀಲರಿಂದಃ

ನಾನು ಬಿ.ಎ ಪದವೀಧರೆ. ನಾನು ಮತ್ತು ಪ್ರತಿವಾದಿಗಳು ಬೇರೆ ಬೇರೆ ವಾಸವಿದ್ದೇವೆ ಎಂದರೆ ಸರಿ. ನಿಪಿ-11 ರಲ್ಲಿ ಉಲ್ಲೇಖಿಸದ ಎಲ್ಲಾ ವ್ಯಕ್ತಿಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರೆಲ್ಲರನ್ನೂ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕ 12.06.2004 ರಂದು ನನ್ನ ಮತ್ತು ಶಿವಣ್ಣನವರ ಮದುವೆಯಾಗಿತ್ತು. ನನ್ನ ಮದುವೆಯ ದಿನಾಂಕವನ್ನು ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. 2 ನೇ ವಾದಿ ಯಾವಾಗ ಹುಟ್ಟಿದ್ದು ಎಂದು ನಾನು ನನ್ನ ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ನನ್ನ ವಾದಪತ್ರದಲ್ಲಿ ಹೇಳಿದ ಬಿಡದಿಯ ವಿಳಾಸದಲ್ಲಿ ಈಗ ವಾಸವಿಲ್ಲ ಎಂದರೆ ಸರಿ.

ನಾನು 2008 ರಿದ ಇಲ್ಲಿಯವರೆಗೂ ಕೆಂಪದ್ಯಾಪನಹಳ್ಳಿಯಲ್ಲಿ ಕೆಲಸ ಮಾಡಿಕೊಂಡು ವಾಸವಿದ್ದೇನೆ. ಕೆಂಪದ್ಯಾಪನಹಳ್ಳಿಯಲ್ಲಿ ನಾನು ವಾಸವಿದ್ದೇನೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ನನ್ನ ಗಂಡ ಮೈನೀ ಪ್ರೀಶಿಯಲ್ ಎಲೆಕ್ಟ್ರಿಕಲ್ ಪ್ರೈವೇಟ್ ಲಿಮಿಟೆಡ್ ಎನ್ನುವಲ್ಲಿ ಕೆಲಸ ಮಾಡುತ್ತಿದ್ದರು. ಶಿವಣ್ಣ ಕೆಲಸ ಮಾಡುತ್ತಿದ್ದಾಗ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿ. ನನ್ನ ಮದುವೆ ನಂತರ ನಾನು ಶಿವಣ್ಣನವರ ಜೊತೆ ಬೆಂಗಳೂರಿನಲ್ಲಿ

ದಿನಾಂಕ : 23.02.2021 ಓ.ಎಸ್ ನಂ.148/2016 ರಲ್ಲಿ
ಪಿ.ಡಬ್ಲ್ಯೂ-1(ಕಲಾವತಿ)

ವಾಸವಿದ್ದೆ ಎಂದರೆ ಸರಿ. 2007 ನೇ ಇಸವಿಯಲ್ಲಿ ಶಿವಣ್ಣ ಅಪಘಾತದಲ್ಲಿ ತೀರಿಕೊಂಡರು. ಅಪಘಾತಕ್ಕೆ ಸಂಬಂಧಪಟ್ಟ ಪರಿಹಾರದ ಹಣವನ್ನು ನಾನೇ ಪಡೆದುಕೊಂಡಿದ್ದೆ ಎಂದರೆ ಸಾಕ್ಷಿಯು ನಾನು ಕುಟುಂಬದವರಿಗೂ ಹಂಚಿದ್ದೆ ಎಂದು ನುಡಿಯುತ್ತಾರೆ. ನಾನು ಶಿವಣ್ಣನವರ ಕಂಪನಿಯಲ್ಲೇ ಅನುಕಂಪದ ಆಧಾರದಲ್ಲಿ ಉದ್ಯೋಗ ದೊರೆತ ಕಾರಣ ಈಗ ಅಲ್ಲೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಅಲ್ಲಿಂದ ಬರುವ ಸಂಬಳದಲ್ಲಿ ನನಗೂ ನನ್ನ ಮಗನಿಗೂ ಜೀವನ ನಡೆಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಾವು ಬಾಡಿಗೆ ಮನೆಯಲ್ಲಿ ವಾಸವಿದ್ದು, ಮಗನ ವಿದ್ಯಾಭ್ಯಾಸ ನಡೆಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನಾನು ಬಾಡಿಗೆ ಮನೆಯಲ್ಲಿ ವಾಸವಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನನ್ನ ಸಂಬಳದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ.

ಶಿವಣ್ಣನವರ ಮರಣಾ ನಂತರ ಅವರು ಕೆಲಸ ಮಾಡುತ್ತಿದ್ದ ಕಂಪನಿಯಿಂದ ದೊರತ ಹಣ ಹಾಗೂ ಪರಿಹಾರದ ಹಣವನ್ನು ನಾನೇ ಇಟ್ಟುಕೊಂಡಿದ್ದು, ನನ್ನ ಕುಟುಂಬದವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ನನ್ನ ಮತ್ತು ಶಿವಣ್ಣನವರ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಿಪಿ-12 ರಲ್ಲಿ ಶಿವಣ್ಣನವರ ಖಾಯಂ ವಿಳಾಸ ಬೊಮ್ಮಸಂದ್ರ, ಆನೇಕಲ್ ತಾಲ್ಲೂಕು ಎಂದು ಕಾಣಿಸಿದ್ದು ಶಿವಣ್ಣ ಅಲ್ಲೇ ವಾಸವಿದ್ದರು ಎಂದರೆ ಸರಿ, ಸಾಕ್ಷಿಯು ಸ್ವತಃ ಅಲ್ಲಿ ಜೀವನ ನಡೆಸುತ್ತಿದ್ದರು ಆದರೆ ಅದೇ ಅವರ ಖಾಯಂ ವಿಳಾಸ ಅಲ್ಲ ಎಂದು ನುಡಿಯುತ್ತಾರೆ.

ದಿನಾಂಕ ಃ 23.02.2021 ಓ.ಎಸ್ ನಂ.148/2016 ರಲ್ಲಿ
ಪಿ.ಡಬ್ಲ್ಯೂ-1(ಕಲಾವತಿ)

ದಾವಾ ಸ್ವತ್ತುಗಳ ಸರ್ವೇ ನಂಬರ್ ನನಗೆ ನಿಖರವಾಗಿ ಗೊತ್ತಿದೆ. ದಾಖಲೆಗಳು ಯಾರ ಹೆಸರಿನಲ್ಲಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳು ಸಿದ್ದಪ್ಪ ಅಂದರೆ 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸಿದ್ದಪ್ಪನವರ ಹೆಸರಲ್ಲದೇ ಪಹಣಿಯಲ್ಲಿ ಬೇರೆ ಯಾವ ಹಕ್ಕುದಾರರ ಹೆಸರು ಇದೆ ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ-1 ರಿಂದ ನಿಪಿ-17 ದಾಖಲೆಗಳನ್ನು ದಾವಾ ಆಸ್ತಿಗಳ ಅಕ್ಕಪಕ್ಕದವರು ತೆಗೆದುಕೊಟ್ಟಿದ್ದರು. ಈ ಎಲ್ಲಾ ದಾಖಲೆಗಳನ್ನು ದಾವೆ ಹಾಕಿದ ನಂತರ ನಾನು ಪಡೆದುಕೊಂಡಿದ್ದೆ ಎಂದರೆ ನಿಜ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಪಹಣಿಗಳಲ್ಲಿ 1, 3, 4 ಪ್ರತಿವಾದಿಗಳ ಹೆಸರುಗಳಿವೆ ಎಂದರೆ ಸರಿ. ಯಾವ ಆಧಾರದಲ್ಲಿ ಸದರಿ ಪ್ರತಿವಾದಿಗಳ ಹೆಸರು ಪಹಣಿಯಲ್ಲಿ ಬಂದಿವೆ ಎಂದು ನಾನು ತಿಳಿದುಕೊಂಡಿದ್ದೇನೆ, ಸಾಕ್ಷಿಯು ತಾತ ಮಾರಣ್ಣನವರ ಹೆಸರಿನಲ್ಲಿದ್ದ ಆಸ್ತಿಯನ್ನು ಮೊಮ್ಮಗ ಮಾರಣ್ಣನವರ ಹೆಸರಿಗೆ ನೇರವಾಗಿ ಬದಲಾವಣೆ ಮಾಡಿದ್ದಾರೆ ಹಾಗೂ ಮಿಲ್ ನಡೆಸುವ ಉದ್ದೇಶದಿಂದ ವಿದ್ಯುಚ್ಛಕ್ತಿ ಸೌಲಭ್ಯ ಪಡೆಯಲು 4 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿದ್ದಾರೆ. ಈ ರೀತಿ ಕಂದಾಯ ದಾಖಲೆ ಬದಲಾವಣೆ ಮಾಡಿಕೊಂಡದ್ದನ್ನು ನಾನು ಯಾವುದೇ ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ.

ನಾನು ಹಾಜರು ಮಾಡಿದ ದಾಖಲೆಗಳಲ್ಲಿ ಎಲ್ಲೂ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಥವಾ ಪಿತ್ರಾರ್ಜಿತ ಆಸ್ತಿಗಳು ಎಂದು ನಮೂದಿಸಿಲ್ಲ ಎಂದರೆ ಸರಿ. 1, 3, 4 ಪ್ರತಿವಾದಿಗಳೇ ಎಲ್ಲಾ ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಅಭಿವೃದ್ಧಿಪಡಿಸಿಕೊಂಡು ಅವರ ಅನುಕೂಲಕ್ಕೆ ತಕ್ಕಂತೆ

ಮನೆ ಕಟ್ಟಿಕೊಂಡು 1, 3, 4 ಪ್ರತಿವಾದಿಗಳೇ ಅಲ್ಲಿ ವಾಸವಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು 1, 3, 4 ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ 5ನೇ ಐಟಂ 3ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಮಾರಣ್ಣನ ಹೆಸರಿನಲ್ಲಿರುವ ಕ್ರಯಪತ್ರದಲ್ಲಿ ಶಿವಣ್ಣ ಹಣ ಸಂದಾಯ ಮಾಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ಖರೀದಿಸಿದಾಗಿನಿಂದ ಇಲ್ಲಿಯವರೆಗೂ 3ನೇ ಪ್ರತಿವಾದಿ ಮಾರಣ್ಣನೇ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಎಲ್ಲೂ ಶಿವಣ್ಣನವರ ಸಹಿ ಇಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಶಿವಣ್ಣ ಹಾಗೂ 3 ಮತ್ತು 4ನೇ ಪ್ರತಿವಾದಿಗಳು ಬೇರೆ ಬೇರೆ ಕಡೆ ವಾಸವಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಶಿವಣ್ಣ ಮತ್ತು ಮಾರಣ್ಣ ಒಟ್ಟಿಗೆ ವಾಸವಿದ್ದರು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.5 ಸ್ವತ್ತು ಈಗ ಬೆಲೆ ಬಾಳುವ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು 3ನೇಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದು ಅದಕ್ಕೆ ಈಗ ಬೆಲೆ ಬಂದಿರುವ ಕಾರಣ ಅದನ್ನು ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ದಿನಾಂಕ ಃ 23.02.2021 <u>ಓ.ಎಸ್ ನಂ.148/2016 ರಲ್ಲಿ</u>
ಪಿ.ಡಬ್ಲ್ಯೂ-1(ಕಲಾವತಿ)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.